Rd No B G 155 5-3-1970

SATYAVADI Daily, MYSORE 4 ★ 53 rd Year of Publication

Golden Jubilee Celebrated Paper

ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಸೆ.ಸಿ

ರೈಲಿನ ಮೂರನೇ ತರಗತಿ ಛಾರ್ಜು ಹೆಚ್ಚುಲ್ಲ

ಮಾಸ್ಕೋ— ಪುರಾತನ ಭಾರತದ ಇತಿಹಾಸದ ಕುರಿತು ಒಂದು ಸಮಗ್ರ ಗ್ರಂಥವನ್ನು ಮಾಸ್ಕೋದಲ್ಲಿ ಪ್ರಕಟಿಸಲಾಯಿತು.

ಕಾರವಾರ— ಮಹಾಶಿವರಾತ್ರಿಯಲ್ಲಿ ಭಾಗವಹಿಸಲು ಭಾರತಾದ್ಯಂತದಿಂದ ಯಾತ್ರಿಕರು 'ದಕ್ಷಿಣ ಕಾಶಿ' ಎಂಬ ಗೋಕರ್ಣಕ್ಕೆ ಬರುತ್ತಿರುವರು – 15 ವರ್ಷಕ್ಕೆ ಕಡಮೆ ಇರುವವರಿಗೆ 15 ಪೈಸೆ, ಅದಕ್ಕೆ ಮೇಲ್ಪಟ್ಟವರಿಗೆ 25 ಪೈಸೆ ಯಾತ್ರಿಕರ ತೆರಿಗೆ ವಿಧಿಸಲಾಗುತ್ತಿದೆ.

ಬೆಂಗಳೂರು— ಕಬಿನಿ ಮತ್ತು ಹೇಮಾವತಿ ಪ್ರಾಜೆಕ್ಟುಗಳನ್ನು ನಾಲ್ಕನೇ ಯೋಜನೆಯಲ್ಲೇ ಪ್ರಯತ್ನಿಸಲಾಗುವುದೆಂದು ವಿಧಾನಸಭೆಯಲ್ಲಿ ತಿಳಿಸಲಾಯಿತು.

ಮದರಾಸು — ಸ್ವಾತಂತ್ರ್ಯ ದೊರೆತನಂತರ ಭಾಷಾವಾರು ರಾಜ್ಯ ವಿಂಗಡನೆಯು ಒಂದು ದೊಡ್ಡ ತಪ್ಪಾಯಿತೆಂದು ಶ್ರೀ ರಾಜಗೋಪಾಲಾಚಾರಿಯವರು ಸ್ವರಾಜ್ಯ ಪತ್ರಿಕೆಯಲ್ಲಿ ಬರೆದಿರುವರು

ರೈಲು ಛಾರ್ಜು ಹೆಚ್ಚುಲ್ಲ

ನವದೆಹಲಿ— ರೈಲಿನ ಮೂರನೇ ಪ್ರಯಾಣಿಕರ ಛಾರ್ಜು ಹೆಚ್ಚಿಸುವನ್ನು, ದ್ವಿದಳ ಧಾನ್ಯವೂ ಸೇರಿ ಆಹಾರ ಪದಾರ್ಥಗಳ ಸಾಗಾಣಿಕೆ ದರ ಹೆಚ್ಚಿಸುವುದನ್ನೂ ಫ್ಲಾಟ್‌ಫಾರಂ ಟಿಕೇಟುಗಳ ದರ ಹೆಚ್ಚಿಸುವುದನ್ನೂ ವಜಾಮಾಡಲಾಗಿದೆ.

★

ಮಾತೃ ಪ್ರೇಮ

ರೋಂ— ಪರೆಯಿಂದ ಕಣ್ಣು ಕಳೆದುಕೊಂಡ ತನ್ನ ಮಗನಿಗೆ ತನ್ನ ಕಣ್ಣು ಕೊಟ್ಟು ದೃಷ್ಟಿ ದೊರಕಿಸುವ ಆಶೆಯಿಂದ ಸತಿ ರೂರಿಮೇಲಿ ತನ್ನ ನಿವಾಸದ ಮೇಲುಸ್ಪರಿಗೆಯಿಂದ ಹಾರಿ ಬಿದ್ದು ಸತ್ತಳು – ಆಕೆ ತಿಳಿಸಿದ್ದಂತೆ ಅವಳ ಕಣ್ಣನ್ನು ಅವಳ ಮಗನಿಗೆ ಯಶಸ್ವಿಯಾಗಿ ಇಡಲಾಯಿತು – ಆದರೆ ಅವನು ತನ್ನ ತಾಯಿ ಸತ್ತಿದ್ದನ್ನು ಕೇಳಿ ವ್ಯಸನಾಕ್ರಾಂತನಾಗಿ ಡಂಗುಬಡಿದು ನಿಧನನಾದನು.

★

ಹೆಚ್ಚು ಬಡ್ಡಿ ಆಶೆಗೆ

ಅನಸಾಲ್— ದಿನ ಸ್ವಲ್ಪ ಮಾಡುವ ಡಿಪಾಜಿಟ್ಟಿಗೆ ಊಹೆ ಮೀರುವ ಬಡ್ಡಿ ಆಶೆ ತೋರಿಸಿ, ರೂ 1 ಲಕ್ಷ ಹಣ ಸೇರಿದ ಬ್ಯಾಂಕು ನಾಲ್ಕು ತಿಂಗಳಲ್ಲಿ ತಣ್ಣಗಾಯಿತು – ಬ್ಯಾಂಕಿನ ಮುಖ್ಯಾಧಿಕಾರಿಗಳು ಪತ್ತೆ ಇಲ್ಲ – ಹೀಗೇ ಜಮ್ಮಡ್ಪುರದಲ್ಲಿ ಒಂದು ತಂಡ ರೂ. 3 ಲಕ್ಷ ಶೇಖರಿಸಿಕೊಂಡು ಮೋಸಮಾಡಿದೆ.

★

ರಾಜ್ಯಸಭೆಗೆ ಆಳ್ವಾರು

ಬೆಂಗಳೂರು— ಎಂ ಪಿ ಸಿ ಸಿ ಅಧ್ಯಕ್ಷ ಡಾ | ನಾಗಪ್ಪ ಆಳ್ವರು ರಾಜ್ಯ ಸಭೆ ಚುನಾವಣೆಗೆ ನಿಲ್ಲುವ ಸಂಭವವಿದೆ.

ಸರ್ಕಾರಕ್ಕೆ ಕೇಂದ್ರದ ಸೂಚನೆ

ಬೆಂಗಳೂರು— ಯೋಜನಾ ಮಂಡಲಿಯ ಒಪ್ಪಿತವಾಗದ, ಕಾವೇರಿ ನೀರು ಸಂಬಂಧದಲ್ಲಿ ಮೈಸೂರು ಸರಕಾರ ಕೈಗೊಂಡಿರುವ ಕೆಲಸಗಳನ್ನು ಒಂದು ವಾರದಲ್ಲಿ ನಿಲ್ಲಿಸಿ, ಹಾಗೆ ಮಾಡಿರುವ ವಿಷಯವನ್ನು ಆ ಅವಧಿಯಲ್ಲಿ ತಿಳಿಸುವಂತೆ ಮೈಸೂರು ಸರಕಾರ ಕಟ್ಟಕಡೆ ಸೂಚನೆ ಕೊಟ್ಟಿದೆ – ಈ ಬಗ್ಗೆ ಮುಖ್ಯಮಂತ್ರಿಗಳಿಗೆ ಕೇಂದ್ರ ನೀರಾವರಿ ಸಚಿವಾಲಯದಿಂದ ಕಾಗದ ಬಂದಿರುವದಾಗಿ ಗೊತ್ತಾಗಿದೆ.

★

ಗಡಿ ವಿಷಯದಲ್ಲಿ ನಿಯೋಗ

ಬೆಂಗಳೂರು— ಮೈಸೂರು-ಮಹಾರಾಷ್ಟ್ರ ಗಡಿ ವ್ಯಾಜ್ಯ ಸಂಬಂಧದಲ್ಲಿ ಮಹಾಜನ ಕಮಿಷನ್ ವರದಿಯನ್ನು ಜಾರಿಗೆ ತರಲು ಪ್ರಧಾನಿ ಮತ್ತು ಕೇಂದ್ರ ನಾಯಕರನ್ನು ಒತ್ತಾಯ ಮಾಡಲು ಹೋಗುವ ಎಲ್ಲ ಪಕ್ಷಗಳ ನಿಯೋಗಕ್ಕೆ ವಿರೋಧಪಕ್ಷ ನಾಯಕ ಶ್ರೀ ಶಿವಪ್ಪನವರು ಮುಂದಾಳಾಗಿರುವರು.

○

ನವದೆಹಲಿ— ಪಾರ್ಲಿಮೆಂಟಿನಲ್ಲಿ ಅಧ್ಯರ ಭಾಷಣ ಸಂಬಂಧದ ಸೂಚನೆಗೆ ಬಂದ 600 ತಿದ್ದುಪಡಿಗಳು ತಿರಸ್ಕರಿಸಲ್ಪಟ್ಟವು.

★

ರಾಯಚೂರು— ಗಡಿ ಪ್ರಹರ್ಷನಕಾರ ವಿದ್ಯಾರ್ಥಿಗಳ ಮತ್ತಿತರರ ಗುಂಪು ರೈಲು ಓಡಾಟಕ್ಕೆ ಅಡ್ಡಿಪಡಿಸಲು ಒಂದು ಸೇತುವೆ ಕಡೆನಿನ್ನೆ ಹೋಗುತ್ತಿದ್ದಾಗ ಲಾಠಿ ಚಾರ್ಜು ಮಾಡಲ್ಪಟ್ಟು ಕೆಲವರು ಗಾಯಗೊಂಡರು.

●

ಹೈದರಾಬಾದು— ದೇವಾಲಯಗಳಿಗೆ ಸೇರಿದ ಭೂಮಿಯನ್ನು ವಶಪಡಿಸಿಕೊಳ್ಳುವ ಯೋಚನೆ ಸರಕಾರಕ್ಕಿಲ್ಲವೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

ವುಡ್‌ಲಾಂಡ್ ಜನಸಂದಣಿಯು 9 ನೇ ವಾರ
ಶಿನ ಅಮೋಘ ಪ್ರಾರಂಭ

ಗಜಪೂಜೆ

ನಟವರ್ಗ– ಕಲ್ಪನ, ಅಶ್ವತ್ಥ್, ಬಾಲಕೃಷ್ಣ, ಪಂಡರಿಬಾಯಿ

ಆಪೆರಾ— 27 2-70 ರಿಂದ

.... ಮನಮೋಹಕ ತಮಿಳು ಚಿತ್ರ ....

ಇರು ಕೋಡುಗಳ

ಜೆಮಿನಿ ಗಣೇಶ್, ತಾಯ್ ನಾಗೇಶ್ ಮತ್ತು ಸಾಹುಕಾರ್ ಜಾನಕಿ ಅಭಿನಯ

ನೀವು ಲಕ್ಷಾಧೀಶ್ವರರಾದರೂ ಆಗಬಹುದು

ಮೈಸೂರು ರಾಜ್ಯದ ಲಾಟರಿ

ಟಿಕೆಟ್ಟು ಒಂದಕ್ಕೆ ರೂ. 1-00

ಅಧಿಕೃತ ಮಾರಾಟಗಾರರು :

ಬಾಹುಸಾರ್ ಕಂಪೆನಿ,
ಓಲ್ಡ್ ಬ್ಯಾಂಕ್ ರೋಡ್,
ಮೈಸೂರು.

ಬಾಹುಸಾರ್ ಕಂಪೆನಿ,
ನೂರಡಿ ರಸ್ತೆ,
ಮೈಸೂರು-4

ಪ್ರೇಮ

ಪ್ರೇಮದಿಂದ ವಿಶ್ವ ಹುಟ್ಟಿದೆ, ಅದರಿಂದ ಬದುಕಿದೆ, ಪ್ರೇಮದ ಕಡೆ ಸರಿಯುತ್ತಿದೆ, ಪ್ರೇಮದಲ್ಲಿ ವಿಲೀನವಾಗುತ್ತದೆ. — ಟಾಗೋರು

ಇಲ್ಲಿ ಪ್ರೇಮಿಸುವುದು– ಇಷ್ಟೂರಿನ್ನಿಲ್ಲದ ಏಕಮಾತ್ರ ಅಗ್ನಿ. — ಹೆಸರಿಲ್ಲ.

ಕೇಳಲ್ಪಟ್ಟ ಪ್ರೇಮ ಒಳ್ಳೆಯದು ; ಆದರೆ ಕೇಳದೆ ಕೊಡಲ್ಪಡುವುದು ಉತ್ತಮ. — ಷೇಕ್ಸ್‌ಪಿಯರ್.

ಪ್ರೇಮದ ಮೇಲಿನ ಏಕಮಾತ್ರ ವಿಜಯ ಓಡಿಹೋಗುವುದು. –ನೆಪೊಲಿಯರ್

ಪ್ರೇಮದ ಪ್ರಥಮ ಗುರುತು, ಜ್ಞಾನದ ಕಡೆಯದು. — ಬ್ರೆಟ್

ಪ್ರೇಮವು ಒಂದು ಗುಟ್ಟಾಗಿರುವುದು ತಪ್ಪಿದರೆ, ಅದು ಸುಖಕರವಾಗಿರುವುದು ತಪ್ಪುವುದು. — ಆಫ್ರಾ ಬೆ.

ಬರ್ನಾರ್ಡ್ ಷಾರವರು ನುಡಿ

ಸಾಧ್ಯವಾದಷ್ಟು ಬೇಗ ಮದುವೆಯಾಗುವುದು ಹೆಂಗಸಿನ ಕೆಲಸ, ಸಾಧ್ಯವಾದಷ್ಟು ತಡವಾಗಿ ಮದುವೆಯಾಗುವುದು ಗಂಡಸಿನ ಕೆಲಸ.

ಜಾಡರ ಹುಳು

ಕಲ್ಕತ್ತಾ— ವಿಶ್ವದಲ್ಲಿ 80000 ವಿವಿಧ ಜಾತಿಯ ಜಾಡರ ಹುಳುಗಳಿವೆಯೆಂದೂ ಇವೆಲ್ಲಾ ಮಾನವನಿಗೆ ಅಪಾಯಕಾರಿಯಾದ ಕ್ರಿಮಿಕೀಟಗಳನ್ನು ನುಂಗುತ್ತವೆಯೆಂದೂ ಪ್ರಾಣಿ ಸಂಬಂಧ ಸರ್ವೆಯಿಂದ ವ್ಯಕ್ತಪಟ್ಟಿದೆ.

ಆಹ್ಲಾದಕರ ಸುವಾಸನೆ

●★●

ಮೈಸೂರು ಗಂಧದ ಎಣ್ಣೆಯು

ತನ್ನ ಶ್ರೇಷ್ಠತೆಯಿಂದ
ಜಗದ್ವಿಖ್ಯಾತಿಯನ್ನು ಪಡೆದಿದೆ.
ಪರಿಶುದ್ಧವಾದ ಗಂಧದ ಎಣ್ಣೆಯು
ಮೈಸೂರು ಸರ್ಕಾರದ ಸೀಲು ಮತ್ತು
ಲೇಬಲ್‌ಗಳುಳ್ಳ ಸೀಸೆಗಳಲ್ಲಿ ಮಾತ್ರ
ದೊರೆಯುತ್ತವೆ.

●

ಮೈಸೂರು ಸರ್ಕಾರದ
ಗಂಧದಎಣ್ಣೆ ಕಾರ್ಖಾನೆ,
ಮೈಸೂರು ಮತ್ತು ಶಿವಮೊಗ್ಗ.

ದೇಶದ ಹಿತಕ್ಕಾಗಿ ಕುಟುಂಬ ಯೋಜನೆ

Help The Gorakshana



Protect the Cow

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳ ಹಬ್ಬೆಹಾಲಾಗಿ ನಡೆಯಲೆ
ಗೋರಕ್ಷಣೆಗೆ ಬೆಂಬಲ ನೀಡಿ

ಅಖಿಲ ಭಾರತದಲ್ಲಿ ಕೂಡಲೇ ಗೋವಧೆ ನಿಷೇಧವಾಗಲಿ

Edited Printed Published by Dharmaprachara Nirata M S Krishna Rao (Proprietor) at the Satyavadi Press Chamarajapuram Mysore